9

# ಪ್ರೇರೇಪಣೆ

ಬಹುಶಃ ಬೇರೆ ಯಾವುದಕ್ಕಿಂತಲೂ ಹೆಚ್ಚಾಗಿ ಸಭಾನಾಯಕರಿಗೆ ಅಗತ್ಯವಾಗಿರುವ ಒಂದು ಸಂಪರ್ಕ ಕೌಶಲ್ಯವು ಇತರರನ್ನು ಪ್ರೇರೇಪಿಸುವ ಸಾಮರ್ಥ್ಯವುಳ್ಳವರಾಗಿರುವುದಾಗಿದೆ. ಈ ಕೆಳಗಿನ ಪರಿಸ್ಥಿತಿಯನ್ನು ಯೋಚಿಸಿರಿ. ಭಾನುವಾರ ಪ್ರಾತಃಕ್ಕಾಲ ಸಭಾ ಹಿರಿಯರು ಸುತ್ತಲೂ ನೋಡುವರು. ಅವರು ಮತ್ತು ಅವರ ಕುಟುಂಬಗಳು ಒಂದೇ ಸಮಯದಲ್ಲಿ ಹಾಜರಿದ್ದರೆ ಕಟ್ಟಡವನ್ನು ತುಂಬಿಕೊಳ್ಳಲು ಸಾಕಷ್ಟು ಸಭೆಯ ಸದಸ್ಯರಿರುವರೆಂಬುದನ್ನು ಅವರು ತಿಳಿದಿದ್ದರೂ, ಕಟ್ಟಡವು ಅರ್ಧದಷ್ಟು ತುಂಬಿರುವುದು, ಕೊಡುಗೆಯು ಇರಬೇಕಾಗಿದ್ದದ್ದಕ್ಕಿಂತಲೂ ಕಡಿಮೆ ಭಾಗದಷ್ಟಂತಿರುವುದು ಎಂಬುದು ಅವರಿಗೆ ನಿಶ್ಚಿತವಾಗಿರುವುದು; ಸದಸ್ಯರು ರಾಜರಂತೆ ಜೀವಿಸುವರು ಆದರೆ ಗತಿಹೀನನಂತೆ ಕೊಡುವರು. ಕೆಲವು ಸಂದರ್ಶಕರು ಹಾಜರಿರುವರು, ಆದಾಗ್ಯೂ, ಸಮಾಜದಲ್ಲಿಯ ಜನರು ಗ್ರಹಿಸಬಲ್ಲವರಾಗಿದ್ದಾರೆ ಮತ್ತು ಕ್ರೈಸ್ತರು ಅವರನ್ನು ಆಮಂತ್ರಿಸಿದರೆ ಅವರು ಬರುತ್ತಾರೆ ಎಂದು ನಾಯಕರು ನಂಬುವರು. ಇದಲ್ಲದೇ, ಇಂದು ಭಾನುವಾರ ಪ್ರಾತಃಕ್ಕಾಲ ಬಂದವರು, ಅಲ್ಲಿ ಇರುವುದನ್ನು ದ್ವೇಷಿಸುವವರಂತೆ ಕಂಡು ಬಂದರು. ಅವರು ಸಂತೋಷವಿಲ್ಲದವರಂತೆ ಇಲ್ಲವೇ ನಿದ್ರೆ ಬಂದವರಂತೆ, ಇಲ್ಲವೇ ಎರಡೂ ರೀತಿಯಲ್ಲಿ ಕಂಡು ಬಂದರು; ಅವರು ಕೆಲವು ಸಮೀಪದ ಸ್ನೇಹಿತರಿಗೆ "ಹಲೋ" ಅನ್ನುವರು ಮತ್ತು ಸಂದರ್ಶಕರಿಗೆ ಏನನ್ನೂ ಹೇಳುವುದೇ ಇಲ್ಲ. ಪಿಸುಗುಟ್ಟುವ ರೀತಿಯಲ್ಲಿ ಅವರು ಹಾಡುವರು; ಪ್ರಸಂಗವಾಗುವಾಗ ತಲೆದೂಗುವರು. ಅಂತಿಮ "ಆಮೇನ್" ಹೇಳಲ್ಪಡುವಾಗ ಅವರು ತ್ವರೀತವಾಗಿ ಹೊರಗೆ ಹೊರಟು ಹೋಗುವರು. ಭಾನುವಾರ ಸಾಯಂಕಾಲದ ಆರಾಧನೆಗೆ ಅವರಲ್ಲಿ ಮೂರರಲ್ಲಿ ಎರಡರಷ್ಟು ಜನರು ಹಿಂದಿರುಗಿ ಬರುವದಿಲ್ಲವೆಂಬುದನ್ನು ಹಿರಿಯರೂ ತಿಳಿದಿರುವರು. ಅವರಲ್ಲಿ ಅನೇಕರು, ಕ್ರೈಸ್ತರಂತೆ ಜೀವಿಸುವದಿಲ್ಲವೆಂಬುದು ಹಿರಿಯರಿಗೆ ತಿಳಿದಿರುವುದು; ಸೋಮವಾರದಿಂದ ಶನಿವಾರದವರೆಗೆ ಜಗತ್ತಿನ ಜನರಿಗಿಂತ ಅವರು ಭಿನ್ನವಾಗಿರುವದಿಲ್ಲ.

ಹಿರಿಯರು ಏನನ್ನು ಮಾಡಬೇಕು? ಪ್ರಾಮಾಣಿಕ ನಾಯಕರು ಆಳುವಂತೆ, ನಿದ್ರೆಯನ್ನು ಕಳೆದುಕೊಳ್ಳುವಂತೆ, ಹಣ್ಣುಗಳನ್ನು ಪಡೆಯುವಂತೆ ಆಗುವುದು ಮತ್ತು ರಾಜೀನಾಮೆ ಕೊಡುವಂತೆ ಮಾಡುವುದೂ ಸಾಕಷ್ಟಾಗಿದೆ.

ಕೆಲವು ಸಲ ಸಭಾನಾಯಕರು ಸಮಸ್ಯೆಯ ಬಗ್ಗೆ *ಮಾತಾಡುವದರಿಂದ* ಇಂಥ ಪರಿಸ್ಥಿತಿಗೆ ಉತ್ತರ ಕೊಡುತ್ತಾರೆ. ಸದಸ್ಯರ ಪ್ರತಿಷ್ಠೆಯ ಕೊರತೆಯ ಬಗ್ಗೆ ದೂರುತ್ತ ಹಿರಿಯರು ಪ್ರತೀವಾರ ತಾಸುಗಳನ್ನು ಕಳೆಯ ಬಹುದು. ಅವರು ನಿರಾಶೆಗೊಳಿಸಲ್ಪಡುವದರಿಂದ ತಟಸ್ಥರಾಗಿ ಉಳಿಯಬಹುದು. ಸದಸ್ಯರ ಅಪನಂಬಿಗಸ್ತಿಕೆಯಿಂದ ಪೀಡಿತರಾಗಿ ಮುಂದೇನು ಮಾಡಬೇಕೆಂಬುದನ್ನು ಯೋಚಿಸಲು ಅಶಕ್ತರಾಗಬಹುದು.

ಕೆಲವು ಸಲ ಸಭೆಯ ನಾಯಕರು ಸಮಸ್ಯೆಗೆ *ಮಾತಾಡುವದರಿಂದ* ಉತ್ತರ ಕೊಡಬಹುದು. ಪೀಠದಿಂದ ಅವರು ಹಿರಿಯರು, ಪ್ರಸಂಗಿಗಳು ಇಲ್ಲವೇ ಇತರರು - ಸತತವಾಗಿ ಮತ್ತು ಬೇಧ ಭಾವ ಮಾಡದೇ ಸದಸ್ಯರನ್ನು, ಅವರಲ್ಲಿ ಕೆಲವರು ಇಲ್ಲವೇ ಅನೇಕರು ಪ್ರತಿಷ್ಠಿತ ಕ್ರೈಸ್ತರಾಗಿದ್ದರೂ, ಅವರು ಪೂರ್ಣ ಹೃದಯದಿಂದ ಸೇವೆ ಮಾಡುವದರಲ್ಲಿ ಸೋತು ಹೋದದ್ದಕ್ಕಾಗಿ ಗದರಿಸಬೇಕು. ಪರಿಣಾಮವು ನಂಬಿಗಸ್ತಿಕೆಯಲ್ಲಿ ಬೆಳವಣಿಗೆಯಾಗದೇ ಹೋಗಬಹುದು.

ಇದಕ್ಕಿಂತ ಹೆಚ್ಚು ಉತ್ತಮವಾದ ಮಾರ್ಗವಿರುವುದೋ? ಸಭೆಯ ಸದಸ್ಯರು ಉಗುರು ಬೆಚ್ಚಗಿನ ಸ್ಥಿತಿಯಲ್ಲಿರುವಾಗ ಸಭೆಯ ನಾಯಕರು ಏನನ್ನು ಮಾಡಬೇಕು? ಒಂದು ಹೆಚ್ಚು ಉತ್ತಮವಾದ ಮಾರ್ಗವಿರುವುದು. ಸಭೆಯ ನಾಯಕರು ಸಮಸ್ಯೆಯ ಬಗ್ಗೆ ದುಃಖಿಸದೇ, ಸದಸ್ಯರು ಹೆಚ್ಚು ನಂಬಿಗಸ್ತರಾಗುವಂತೆ ಪ್ರೋತ್ಸಾಹಿಸುವ ಮಾರ್ಗಗಳಿಗಾಗಿ ನೋಡಬೇಕು ಅವರು ಪ್ರೇರೇಪಣೆಯ ಕೌಶಲ್ಯಗಳನ್ನು ಕಲಿತುಕೊಳ್ಳುವ ಅಗತ್ಯತೆಯಿದೆ.

## ಪ್ರೇರೇಪಣೆಗಾಗಿ ಅಗತ್ಯತೆ

ಸದಸ್ಯರನ್ನು ಪ್ರೇರೇಪಿಸುವದನ್ನು ಕುರಿತು ಸಭೆಯ ನಾಯಕರು ಯಾಕೆ ಚಿಂತಿಸುವವರಾಗಿರಬೇಕು? ದೇವರ ಸ್ವಾಸ್ತ್ಯದ ಮೇಲೆ ಹಿರಿಯರು “ಯಜಮಾನರಂತೆ” ವರ್ತಿಸಬಾರದಾಗಿದ್ದರೆ, ಸದಸ್ಯರು ಏನನ್ನಾದರೂ ಮಾಡುವಂತೆ ನಡಿಸಲಿಕ್ಕಿರುವ ಬದಲಿ ಮಾರ್ಗವು ಅವರನ್ನು ಪ್ರೇರೇಪಿಸುವುದಾಗಿದೆ.

ಪ್ರೇರೇಪಣೆಯೂ ಸಹ ಯಾಕೆ ಅಗತ್ಯವಾಗಿದೆ? ಕ್ರೈಸ್ತರು ದೇವರ ಚಿತ್ತವನ್ನು ಮಾಡುವದರಲ್ಲಿ ಮತ್ತು ಆತನಿಗೆ ನಂಬಿಗಸ್ತರಾಗಿರುವದರಲ್ಲಿ ಆಸಕ್ತಿಯುಳ್ಳವರಾಗಿರ ಬೇಕು. ಪರಿಶುದ್ಧ ಬರಹಗಳು ಬೋಧಿಸುವದನ್ನು ನಾಯಕರು ತೋರಿಸಿದರೆ, ಕ್ರೈಸ್ತರು ತಾವು ಮಾಡುವಂಥದ್ದು ಸರಿಯಾದದ್ದಾಗಿದೆ ಎಂದು ಭರವಸೆ ಕೊಡುವಂಥದ್ದು ಸಾಕಷ್ಟಾಗಿರುವದಿಲ್ಲವೋ?

ಬಹುಶಃ ಅದು ಸಾಕಷ್ಟಾಗಿರಬಹುದು, ಆದರೆ ಯಾವಾಗಲೂ ಅಲ್ಲ. ಕೇವಲ ಕ್ರೈಸ್ತನಾಗುವ ಕೃತ್ಯವು ಒಬ್ಬ ವ್ಯಕ್ತಿಯನ್ನು ಪರಿಪೂರ್ಣನನ್ನಾಗಿ ಮಾಡುವದಿಲ್ಲ ಇಲ್ಲವೇ ಶೋಧನೆಗಳಿಗೆ ಬಲಿಯಾಗದಿರುವಂತೆ ಮಾಡುವದಿಲ್ಲ. ಬಲಶಾಲೀ ಶಿಷ್ಯರೂ ಸಹ ಬಲವಾದ ಶೋಧನೆಗಳ ವಿರುದ್ಧವಾಗಿ ಇನ್ನೂ ಹೋರಾಡಬೇಕಾಗಿರುವುದು (ರೋಮಾಪುರ 7; 1 ಕೊರಿಂಥ 9:27). ಅನೇಕ ಕ್ರೈಸ್ತರು ತಾವು ಏನು ಮಾಡತಕ್ಕದ್ದು ಎಂಬುದನ್ನು ತಿಳಿದವರಾಗಿರುತ್ತಾರೆ, ಆದರೆ ಅವರು ಅದನ್ನು ಮಾಡುವುದೇ ಇಲ್ಲ. ಪ್ರೇರೇಪಣೆಯು ಅಗತ್ಯವಾದದ್ದಾಗಿದೆ. ಆಹಾರ ನಿಯಂತ್ರಿಸುವ ಅಗತ್ಯತೆಯುಳ್ಳ ವ್ಯಕ್ತಿಯು ಆಹಾರ ನಿಯಂತ್ರಿಸುವಂತೆ ಇರಲು ಪ್ರೇರೇಪಿಸಲ್ಪಡಬೇಕು. ಮತ್ತು ಉಗುರು ಬೆಚ್ಚಗಿನ ಪರಿಸ್ಥಿತಿಯ ಕ್ರೈಸ್ತನು ಪ್ರತಿಷ್ಠಿಸಲ್ಪಟ್ಟವನಾಗಲು ಪ್ರೇರೇಪಿಸಲ್ಪಡಬೇಕು.

## ಪ್ರೇರೇಪಣೆಯ ಅರ್ಥ

ಇತರರನ್ನು ಪ್ರೇರೇಪಿಸಲು ಸಾಧ್ಯವಿದೆಯೋ? “ಸೇವಕ ನಾಯಕತ್ವದ” ಬಗ್ಗೆ ಒಂದು ಭಾಷಣದಲ್ಲಿ ಒಬ್ಬ ಸಹೋದರನು ಮಾತಾನಾಡುತ್ತ, ಇನ್ನೊಬ್ಬನನ್ನು ಪ್ರೇರೇಪಿಸುವುದು ಸಾಧ್ಯವಾಗುವದಿಲ್ಲ, ಪ್ರೇರೇಪಿಸುವಿಕೆಯು ಒಳಗಿನಿಂದ ಬರುತ್ತದೆ ಎಂದು ಹೇಳಿದನು.

ಈ ಸಹೋದರನಿಗೆ ನಿಶ್ಚಿಯವಾಗಿ ಒಂದು ಅಂಶವಿತ್ತು. ವ್ಯತಿರಿಕ್ತ ಪರಿಸ್ಥಿತಿಗಳಿದ್ದರೂ ಕೆಲವರು ದೊಡ್ಡ ಸಂಗತಿಗಳನ್ನು ಸಾಧಿಸುತ್ತಾರೆ ಆದರೆ ಇತರರು ಜನರು ಒದಗಿಸುವ ಲಾಭಗಳಿದ್ದರೂ ಸೋತುಹೋಗುತ್ತಾರೆ. ಹೀಗಿದ್ದರೂ, ನಾವು ಇತರರನ್ನು ಪ್ರೇರೇಪಿಸಲಾರೆವು ಎಂದು ಹೇಳುವುದು ಪ್ರೇರೇಪಿಸುವದರ ಸಂಕುಚಿತ ನಿರೂಪಣೆಯನ್ನು ಅನ್ವಯಿಸುತ್ತದೆ. ಪ್ರೇರೇಪಿಸುವದರ ಮೇಲೆ ಬರೆದ ಎಲ್ಲಾ ಪುಸ್ತಕಗಳು ಮತ್ತು ವಿಷಯದ ಮೇಲೆ ಕೊಟ್ಟ ಎಲ್ಲಾ ಭಾಷಣಗಳು ಇತರರನ್ನು ಪ್ರೇರೇಪಿಸುವಕ್ಕಾಗಿ ಒಬ್ಬ ವ್ಯಕ್ತಿಯು ಪಾತ್ರವಹಿಸಬಹುದು, ಇಲ್ಲವೇ ಏನನ್ನಾದರೂ ಸಾಧಿಸಲಿಕ್ಕೆ ಅವರಿಗಿರಬೇಕಾದ ಪ್ರೇರೇಪಣೆಯನ್ನು ತಮ್ಮಲ್ಲಿ ಬೆಳಸಿಕೊಳ್ಳಲು ಸಹಾಯ ಮಾಡಬಹುದು. ಅವರು ಅದನ್ನು ಸಾಧಿಸುವರೋ ಇಲ್ಲವೋ ಎಂಬುದು ಅವರಿಗೆ ಬಿಟ್ಟದ್ದಾಗಿರುತ್ತದೆ.

ಇತರರನ್ನು ಪ್ರೇರೇಪಿಸುವದರಲ್ಲಿ ನಾವು ಯಾವ ಪಾತ್ರ ವಹಿಸಬಹುದು? ನಾಯಕರು ಇತರರನ್ನು ಪ್ರೇರೇಪಿಸದಿದ್ದರೂ ಅವರು ಇತರರ ಸ್ವಯಂ ಪ್ರೇರೇಪಣೆಗಾಗಿ ಅರಳಲು ಮತ್ತು ಬೆಳೆಯಲು ಸಾಧ್ಯವಾಗುವಂಥ ಒಂದು ಸನ್ನಿವೇಶವನ್ನು ಒದಗಿಸಬಹುದು. ಅದು ಈ ಪಾಠದಲ್ಲಿ

ನಮ್ಮ ಚಿಂತನೆಯಾಗಿದೆ: ಸದಸ್ಯರು ತಾವು ಮಾಡತಕ್ಕದ್ದನ್ನು ಮಾಡಲು ಬಯಸುವಲ್ಲಿ ಸಭೆಯ ನಾಯಕರು ಯಾವ ಶರತ್ತುಗಳನ್ನು ಒದಗಿಸಲು ಏನು ಮಾಡಬೇಕು?

## ಪ್ರೇರೇಪಣೆಯ ವಿಧಾನ

ನಾಯಕರು ಸಭೆಯನ್ನು ಹೇಗೆ ಪ್ರೇರೇಪಿಸಬಹುದು? ಜೇಮ್ಸ್ ಮೀನ್ಸ್ ಎಂಬುವರು ಸಭಾ ಸೇವಕರಿಂದ ನಡಿಸಲ್ಪಡುವ ನಾಯಕತ್ವದ ಬಗ್ಗೆ ಬರೆಯುತ್ತ "ಅಯೋಗ್ಯವಾದ ಪ್ರೇರೇಪಣಾತ್ಮಕ ಯುಕ್ತಿಗಳನ್ನು ವಿವರಿಸಿದ್ದಾರೆ"[1] ಮತ್ತು ಅನಂತರ ಈ ಕೆಳಗಿನ "ಯೋಗ್ಯವಾದ ಪ್ರೇರೇಪಣೆಗಳ ಯುಕ್ತಿಗಳನ್ನು" ಚರ್ಚಿಸಿದ್ದಾರೆ:[2] (1) ಪ್ರೋತ್ಸಾಹದಿಂದ ಪ್ರೇರಣೆ, (2) ಗುಣಾತ್ಮಕ ಸೇವೆಯ ಮುಖಾಂತರ ಪ್ರೇರಣೆ (ಇದು ವಾಕ್ಯದ ಸೇವೆಗಾಗಿ ನಾಯಕನು ಪ್ರಾರ್ಥನೆಯಲ್ಲಿ ಹಾಗೂ ಸಿದ್ಧತೆಯಲ್ಲಿ ಸಮಯವನ್ನು ಕಳೆಯುವದನ್ನು ಒಳಗೊಂಡಿರುತ್ತದೆ), ಮತ್ತು (3) ಜವಾಬ್ದಾರಿಕೆಯನ್ನು ವಹಿಸುವದರಿಂದ ಪ್ರೇರೇಣೆ. ಮೀನ್ಸ್ ಅವರು ಹೀಗೆ ಹೇಳಿದರು,

> ಜನರ ಮೇಲೆ ಪರಿಣಾಮ ಮಾಡುವ ನಿರ್ಣಯಗಳಲ್ಲಿ ಅವರನ್ನು ಒಳಗೊಳಿಸುವುದು ನೈತಿಕವಾಗಿ ಸರಿಯಾದದ್ದಾಗಿದೆ. ... ವಿಧಾನದಿಂದ ಹೊರಗಿಡಲ್ಪಡುವಾಗ ಜನರು ಯೋಗ್ಯವಾಗಿ ಪ್ರೇರೇಪಿಸುವುದು ಕ್ವಚಿತವಾಗಿರುತ್ತದೆ. ಒಳ್ಳೆಯ ನಾಯಕರು, ಹೆಚ್ಚು ಜನರು ಗುಂಪು ವಿಚಾರಿಸುವಿಕೆಯಲ್ಲಿ ಮತ್ತು ಅವರ ತಲಾಂತುಗಳನ್ನು ಹಾಗೂ ಸಾಮರ್ಥ್ಯಗಳಲ್ಲಿ ಒಳಗೊಳ್ಳುವಾಗ, ಬೆಲೆಯುಳ್ಳ ಉದ್ದೇಶಗಳನ್ನು ಸಾಧಿಸಲು ಪ್ರೇರೇಪಿಸಲ್ಪಡುವರೆಂದು ತಿಳಿದಿರುತ್ತಾರೆ. ...[3]

ಅವರ ಸೂಚನೆಗಳು ಸಹಾಯಕವಾದವುಗಳಾಗಿವೆ. ಅದಲ್ಲದೇ, ಸಭೆಯ ಸದಸ್ಯರನ್ನು ಪ್ರೇರೇಪಿಸುವದಕ್ಕೆ ನಾಯಕರು ಅನುಸರಿಸಲು ನಾವು ಆರು ನಿರ್ದಿಷ್ಟವಾದ ಹೆಜ್ಜೆಗಳನ್ನು ಸೂಚಿಸುತ್ತೇವೆ.

### ಪರಿಸ್ಥಿತಿಯನ್ನು ವಿಭಜಿಸುವುದು

ಸಭಾನಾಯಕರು ನಿರ್ದಿಷ್ಟವಾದ ಸದಸ್ಯರ ಬಗ್ಗೆ ಯೋಚಿಸಲು ಪ್ರಾರಂಭಿಸಬೇಕು. ಸಮಸ್ಯೆಯು ಕಳೆದ ವರ್ಷ ಆರು ಜನ ಸದಸ್ಯರು ಬಿದ್ದು ಹೋದರು, ಎಂಬುದಲ್ಲ ಆದರೆ ಜೊರ್ಡ್, ಮಾರ್ಟಿನ್, ಜೊನ್ನಿ, ಮೇರಿ, ಸ್ಯಾಲ್ಲಿ ಮತ್ತು ಜೇನ್ ಎಂಬುವರು ಕಳೆದ ವರ್ಷ ಬಿದ್ದು ಹೋದರು ಎಂಬುದು ಆಗಿರುತ್ತದೆ! ಪ್ರಶ್ನೆಯು "ಯಾಕೆ ಅನೇಕ ಜನರು ತಿಂಗಳಲ್ಲಿ ಒಂದು ಸಲ ಬರುತ್ತಾರೆ?" ಎಂದಾಗಿರುವದಿಲ್ಲ. ಆದರೆ ಅದು, "ಹ್ಯಾರಿ ಯಾಕೆ ತಿಂಗಳಲ್ಲಿ ಒಂದು ಸಲ ಮಾತ್ರ ಬರುತ್ತಾನೆ?" ಎಂಬುದಾಗಿರುತ್ತದೆ. ಸಭೆಯ ನಾಯಕರು ತಮ್ಮಷ್ಟಕ್ಕೆ ತಾವೇ ಅಂಥ ಪ್ರಶ್ನೆಗಳನ್ನು ಕೇಳುವದಕ್ಕೆ ಪ್ರಾರಂಭಿಸುವವರೆಗೆ, ಅವರು "ಕುರುಬರಂತೆ" ಇಲ್ಲವೇ ಮಂದೆಯ "ಪಾಲಕರಂತೆ" ನಿಜವಾಗಿಯೂ ಕಾರ್ಯಮಾಡುವದಿಲ್ಲ, ಮತ್ತು ಅಪನಂಬಿಗಸ್ತಿಕೆಯ ಸಮಸ್ಯೆಯನ್ನು ಪರಿಹರಿಸುವ ನಿರೀಕ್ಷೆಯಲ್ಲಿರುವದಿಲ್ಲ.

ಒಬ್ಬ ಭಾಷಣಕಾರನು, ಶ್ರೋತೃಗಳ ಸಮೂಹನ್ನು ಅದರ ರಚನೆಯ ಬಗ್ಗೆ ಕೆಲವೊಂದನ್ನು ತಿಳಿದಿರದಿದ್ದರೆ ಅವನು ಅದರ ಮನವೊಲಿಸಲಾರನು: ಈ ಜನರು ಯಾರು? ಅವರ ಹಿನ್ನೆಲೆಗಳು ಯಾವವು? ಯಾವುದು ಅವರನ್ನು ಚಲಿಸುತ್ತದೆ? ಅದರಂತೆ, ಸರಿಯಾದದ್ದನ್ನು ಮಾಡಲಿಕ್ಕೆ ಸದಸ್ಯರನ್ನು ಪ್ರೇರೇಪಿಸುವದಕ್ಕೆ ಸಭೆಯ ನಾಯಕರಿಗೆ ಬಹಳಷ್ಟು ನಿರೀಕ್ಷೆ ಇರುವ ಮೊದಲು, ಅವರು ಆ ಸದಸ್ಯರು ಎಲ್ಲಿ ಇರುವರು, ಅವರು ಅಲ್ಲಿ ಯಾಕೆ ಇರುವರು, ಮತ್ತು ಅವರು ಯಾವುದಕ್ಕೆ ಚಿಂತಿಸುವರು ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು ಅವರು ಹೆಚ್ಚು ಉತ್ತಮವಾದದ್ದನ್ನು ಮಾಡುವದರ ಕಡೆಗೆ ನಡಿಸಲು ಇದು ಮೊದಲನೆಯ ಹೆಜ್ಜೆಯಾಗಿದೆ.

### ಯೋಗ್ಯವಾದ ಉದಾಹರಣೆಯನ್ನು ಇಟ್ಟುಕೊಳ್ಳುವುದು

ಒಳ್ಳೆಯ ಉದಾಹರಣೆಗಳನ್ನು ಇಟ್ಟುಕೊಳ್ಳುವ ನಾಯಕರು ಹಿಂಬಾಲಕರನ್ನು ಪ್ರೇರೇಪಿಸುವವರಾಗಿರುತ್ತಾರೆ. ಮನವೊಲಿಸುವಿಕೆಯು, ಭಾಗಶಃವಾಗಿಯಾದರೂ, ಭಾಷಣಕಾರನ ನೈತಿಕ ಮನವಿಯ ಮೇಲೆ ಅವಲಂಭಿಸಿರುತ್ತದೆ. 1 ಪೇತ್ರ 5:3ರ ಪ್ರಕಾರ, ಹಿರಿಯರು "ಮಂದೆಗೆ ಮಾದರಿಯಾಗಿರತಕ್ಕದ್ದು" ಮಂದೆಯು ಹೇಗಿರಬೇಕೆಂದು ಮತ್ತು ಮಾಡಬೇಕೆಂದು ನಾಯಕರು ಸೂಚಿಸುವರೋ, ಅವರು ಅದರ ಹಾಗೆ ಇರಲು ಮತ್ತು ಮಾಡಲು ಶ್ರಮೆ ಪಡುವವರಾಗಿರಬೇಕು.

ಅವರು ಯಾವಾಗಲೂ, ಪರಿಪೂರ್ಣ ಉದಾಹರಣೆಯನ್ನು ಒದಗಿಸುವದಿಲ್ಲವೆಂಬುದು ಸತ್ಯವಾಗಿಯೇ ಇದೆ. ಅವರು ಕೆಲವು ಸಲ ತಪ್ಪಿ ಹೋಗಿ ಬಿದ್ದು ಹೋಗುತ್ತಾರೆ. ಹೀಗಿದ್ದರೂ, ಅವರ ಸೋಲುಗಳಲ್ಲಿ, ಅವರು ಒಳ್ಳೆಯ ಉದಾಹರಣೆಗಳನ್ನು ಒದಗಿಸಬಹುದು. ಕ್ರೈಸ್ತರು ಬಿದ್ದು ಹೋಗುವಾಗ - ಅವರು ಹೇಗೆ ಕ್ಷಮಾಪಣೆಯನ್ನು ಹುಡುಕುವರು ಹಾಗೂ ಆಗ ಕ್ರಿಸ್ತನನ್ನು ನೇಮಿಸಲು ತಮ್ಮ ಪ್ರಯತ್ನಗಳನ್ನು ನವೀಕರಿಸಿಕೊಳ್ಳುವರು - ಎಂಬುದನ್ನು ಪ್ರದರ್ಶಿಸಬಹುದು.

### ಪ್ರೋತ್ಸಾಹದಾಯಕ ಸನ್ನಿವೇಶವನ್ನು ಒದಗಿಸುವುದು

ಸಭೆಯಲ್ಲಿ ಸದಸ್ಯರು ಪೂರ್ಣ ಹೃದಯದಿಂದ ಸೇವೆ ಮಾಡಲಿಕ್ಕಾಗುವಂಥ ವಾತಾವರಣವನ್ನು ನಾಯಕರು ಸೃಷ್ಟಿಸಬಹುದು ಚೆನ್ನಾಗಿ ನೀರನ್ನು ಸುರಿಯುವಾಗ ಹೂವುಗಳು ಅರಳುವವು. ಜಾಗರೂಕತೆಯಿಂದ ಬೆಳಸಿದ ತೋಟಗಳಲ್ಲಿ ಕಾಯಿಪಲ್ಲೆಗಳು ಬೆಳೆಯುವವು. ಹಾಗೆಯೇ ಸಭೆಯಲ್ಲಿ ಜನರು ಪ್ರೋತ್ಸಾಹದಾಯಕ ವಾತಾವರಣದಲ್ಲಿ, "ನಿರಾಶೆಯ ಮಾತುಗಳು ಕ್ವಚಿತವಾಗಿ ಕೇಳಲ್ಪಡುವಲ್ಲಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಮಾಡುವರು."

ಯಾವುದು ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸುವುದು? ಪ್ರಸಂಗಿಸುವುದು ಹಾಗೂ ಬಹಿರಂಗ ಸಂಪರ್ಕವು, ಸಾಧ್ಯವಾದಷ್ಟು ಮಟ್ಟಿಗೆ, ನಿಶ್ಚಿತ ವಾದವುಗಳಾಗಿರುತ್ತವೆ. ಸಭೆಯ ನಾಯಕರು ಪ್ರೋತ್ಸಾಹಿಸುವ ಸದಸ್ಯರ ಅಂಶವನ್ನು ಮಾಡುವರು (1 ಥೆಸಲೋನೀಕ 5:11, 14; ಇಬ್ರಿಯ 3:13). ಸದಸ್ಯರು ತಾವು ಬೆಲೆಯುಳ್ಳವರೆಂದು ತಿಳಿದು ಕೊಳ್ಳುವಂತೆ ನಾಯಕರು ಮಾಡುವರು; ಅವರು ಮಾಡುವ ಒಳ್ಳೆಯದಕ್ಕಾಗಿ ಅವರನ್ನು ಹೊಗಳುವರು; ಅವರ ಬುದ್ಧಿವಾದವನ್ನೂ ಸಲಹೆಗಳನ್ನೂ ಕ್ರಮಪ್ರಕಾರವಾಗಿ ಕೇಳುವರು; ಅವರಲ್ಲಿ ಮಾನವ ಜೀವಗಳಂತೆ ಅವರಲ್ಲಿ ಆಸಕ್ತಿ ತೋರಿಸುವರು ("ಸಂಗತಿಗಳಂತೆ" ಅಲ್ಲಿ ನಾಯಕರು ಒಳ್ಳೆಯವರಾಗಿ ಕಾಣುವಂತೆ ಮಾನವ ಸಂಗತಿಗಳು ಕಾರ್ಯಮಾಡುವಂತೆ). ಸಭೆಯು ಕೂಡಿಬರುವ ಪ್ರಾಪಂಚಿಕ ಪರಿಸರವನ್ನು ಸಾಧ್ಯವಾದಷ್ಟು ಆಲ್ಹಾದಕರವಾದದ್ದನ್ನಾಗಿ ಅವರು ಮಾಡಲು ಪ್ರಯತ್ನಿಸುವರು. ಆರಾಧನೆಗಳನ್ನು ಮತ್ತು ಬೈಬಲ್ ಕ್ಲಾಸುಗಳನ್ನು ಸಹಾಯದಾಯಕವಾದವುಗಳನ್ನಾಗಿಯೂ ಮೇಲಕ್ಕೆತ್ತುವವುಗಳನ್ನಾಗಿಯೂ ಮಾಡುವರು.

### ಸಭೆಯು ಬೋಧಿಸುವಂತೆ ನೋಡುವುದು

ಸಭೆಯ ನಾಯಕರು ಸಭೆಯು ಯೋಗ್ಯವಾಗಿ ಬೋಧಿಸಲ್ಪಡುವದರ ಬಗ್ಗೆ ನಿಶ್ಚಿತತೆಯುಳ್ಳದ್ದಾಗಿರಬೇಕು. ಜನರು ಚೆನ್ನಾಗಿ ತಿಳಿಯುವವರೆಗೆ ಹೆಚ್ಚು ಉತ್ತಮವಾಗಿ ಮಾಡಲಾರರು. ಜನರು ಮಾಡಬೇಕಾದದ್ದನ್ನು ಮಾಡುವರು ಎಂಬುದಕ್ಕೆ ತರಬೇತಿ ಮಾತ್ರವೇ ಭರವಸೆ ಕೊಡುವದಿಲ್ಲ, ಆದರೆ ಕ್ರೈಸ್ತರು ಏನು ಮಾಡಬೇಕು ಎಂಬುದನ್ನು ಬೋಧಿಸುವಲ್ಲಿ ಸೋತು ಹೋಗುವುದು ಅವರು ಅದನ್ನು ಮಾಡುವದಿಲ್ಲವೆಂದು ನಿಶ್ಚಿತವಾದ ಭರವಸೆ ಕೊಡುವುದು ಹೊಸ ಒಡಂಬಡಿಕೆಯ ಹೆಚ್ಚಾದ ಭಾಗವು ಹೇಗೆ ಜೀವಿಸಬೇಕೆಂಬುದನ್ನು ಕ್ರೈಸ್ತರಿಗೆ ಬೋಧಿಸಲು ಬರೆಯಲ್ಪಟ್ಟಿತು. ಆದುದರಿಂದ ಹೇಗೆ ಜೀವಿಸಬೇಕೆಂಬುದನ್ನು ಕ್ರೈಸ್ತರಿಗೆ ಬೋಧಿಸಲು

ಜಾಗರೂಕತೆ ವಹಿಸಬೇಕು. ಪೌಲನು ಬೋಧಿಸಿದ ಮತ್ತು ಬೋಧಿಸಬೇಕೆಂದು ಇತರರನ್ನು ಒತ್ತಾಯಿಸಿದ ಅದೇ ರೀತಿಯ "ಸ್ವಸ್ಥ ಬೋಧನೆಯನ್ನು" ನಾವು ಕಲಿಸಿದರೆ, ಆಗ ನಾವು ಕ್ರೈಸ್ತ ಜೀವಿಸುವಿಕೆಯ ಬಗ್ಗೆ ಹಾಗೆಯೇ ಸಭೆಯಲ್ಲಿ ಹೇಗೆ ಸೇರಿಕೊಳ್ಳಬೇಕು ಎಂಬುದರ ಬಗ್ಗೆ ನಾವು ಬೋಧಿಸಬೇಕು.

**ಸೇವೆಗೆ ಆತಂಕಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಮತ್ತು ತೆಗೆದು ಹಾಕಲಿಕ್ಕೆ ಹುಡುಕುವುದು**

ಸಭಾ ನಾಯಕರು ಸಭೆಯಲ್ಲಿ ಸೇವೆ ಮಾಡಲಿಕ್ಕೆ ಜನರಿಗಿರುವ ನಿಜವಾದ ಸಮಸ್ಯೆಗಳನ್ನು ಗುರುತಿಸುವವರು ಮತ್ತು ತಿಳಿದು ಕೊಳ್ಳುವರು; ಆಗ ಅವರು ಆ ಪ್ರಶ್ನೆಗಳನ್ನು ಬಗೆಹರಿಸಲು ಪ್ರಯತ್ನಿಸುವರು. ಹೆಚ್ಚಾದದ್ದನ್ನು ಮಾಡಲಿಕ್ಕೆ ಆಗದಿರುವದಕ್ಕಾಗಿ ಕೆಲವು ಸಲ ಸದಸ್ಯರಿಗೆ ಯೋಗ್ಯವಾದ ಕಾರಣಗಳಿರುವದನ್ನು ನಾಯಕರು ಗುರುತಿಸತಕ್ಕದ್ದು. ಆರಾಧನೆಗಳಗೆ ಹಾಜರಿರುವ ಜನರ ಸಂಖ್ಯೆಯನ್ನು ಗಮನಿಸಿರಿ. ಕೆಲವರು ಅಸ್ವಸ್ಥರಾಗಿರುವದರಿಂದ ಬರಲಿಕ್ಕಾಗುವದಿಲ್ಲ. ರಾತ್ರಿಯಲ್ಲಿ ವಾಹನ ನಡಿಸಲು ಕೆಲವರಿಗೆ ಬರಲಿಕ್ಕಾಗುವದಿಲ್ಲ. ರಾತ್ರಿಯಲ್ಲಿ ವಾಹನ ನಡಿಸಲು ಕೆಲವರಿಗೆ ಸಮಸ್ಯೆಯಿರುತ್ತದೆ. ಬುದ್ಧಿವಂತ ನಾಯಕರು ಹಾಜರಿರದೇ ಹೋದದ್ದಕ್ಕಾಗಿ ಸದಸ್ಯರಿಂದ ಕೊಡಲ್ಪಡುವ ಎಲ್ಲಾ ಕಾರಣಗಳನ್ನು ಒಟ್ಟಾಗಿ ಕೂಡಿಸುವದಿಲ್ಲ ಮತ್ತು ಕಾರಣಗಳೆನ್ನುವದಕ್ಕಿಂತ "ನೆಪಗಳು" ಎಂದು ಅವುಗಳನ್ನು ವರ್ಗೀಕರಿಸುವರು.

ನಾಯಕರು ಸದಸ್ಯರ ನಿಜವಾದ ಸಮಸ್ಯೆಗಳನ್ನು ವಿಚಾರಕ್ಕೆ ತೆಗೆದುಕೊಂಡರೆ, ಅದಕ್ಕೆ ತಕ್ಕಂತೆ ಯೋಜನೆ ಮಾಡಿದರೆ, ಮತ್ತು ಆಗ ಆ ಯೋಜನೆಗಳನ್ನು ಸದಸ್ಯರಿಗೆ ತಿಳಿಸಿದರೆ, ಆ ಯೋಜನೆಗಳಿಗೆ ಸದಸ್ಯರು ಸಕಾರಾತ್ಮಕವಾಗಿ ಸ್ಪಂಧಿಸಲು ಪ್ರೇರೇಪಿಸಲ್ಪಡುವರು.

**ಸದಸ್ಯರ ಅನಿಸುವಿಕೆಯ ಅಗತ್ಯತೆಗಳ ಮೇಲೆ ಮನವಿಗಳನ್ನು ತಳಹದಿಯನ್ನಾಗಿ ಇಡುವುದು**

ಅಂತಿಮವಾಗಿ, ಸದಸ್ಯರು ಸಭೆಯ ಕೆಲಸ ಮತ್ತು ಆರಾಧನೆಯಲ್ಲಿ ನಂಬಿಗಸ್ತನಾಗಿರುವಂತೆ ಮನವೊಲಿಸಲು ಹುಡುಕುವಂತೆ, ಅವರು ತಮ್ಮ ಮನವಿಗಳನ್ನು ತಾವು ಪ್ರೇರೇಪಿಸಲು ಪ್ರಯತ್ನಿಸುತ್ತಿರುವ ಜನರ ಅನುಭವಿಸುವಿಕೆಯ ಮನವಿಗಳ ಮೇಲೆ ಅವಲಂಭಿಸಬೇಕು.[4]

ಬಹಳ ಸಲ, ಸಭೆಯ ನಾಯಕರು ಜನರು ಕ್ರೈಸ್ತರಾಗುವಂತೆ ಮಾಡಲು ಪ್ರಯತ್ನಿಸುವದಕ್ಕೆ ಇಲ್ಲವೇ ಯಥಾರ್ಥವಾದ ಕ್ರೈಸ್ತರಂತೆ ಜೀವಿಸುವದಕ್ಕೆ ಒಂದೇ ರೀತಿಯ ವಿಧಾನವನ್ನು ಅನುಸರಿಸುತ್ತಾರೆ: ಹಾಗೆ ಮಾಡುವುದು ಅವರಿಗೆ ಪರಲೋಕಕ್ಕೆ ಹೋಗಲು ಸಹಾಯ ಮಾಡುವುದು, ಹಾಗೆ ಮಾಡುವುದು ಸೋತು ಹೋದರೆ ಅದು ಅವರನ್ನು ನರಕಕ್ಕೆ ಕಳುಹಿಸುವುದು. ಈ ಪ್ರೇರೇಪಿಸುವಿಕೆಗೆ ಮನವಿ ಮಾಡುವುದರಲ್ಲಿ ಯಾವುದೂ ತಪ್ಪಿಲ್ಲದಿದ್ದರೂ, ಅದು ಕೆಲವೊಂದನ್ನು ಮುಂದಾಗಿ ಊಹಿಸುತ್ತದೆ. ಅಂದರೆ, ಕೇಳುಗನು ಪರಲೋಕಕ್ಕೆ ಹೋಗುವದರಲ್ಲಿ ಮತ್ತು ನಕರವನ್ನು ತಪ್ಪಿಸಿಕೊಳ್ಳುವದರಲ್ಲಿ ಆಸಕ್ತನಾಗಿದ್ದಾನೆಂದು ಅರ್ಥಮಾಡಿಕೊಳ್ಳುವುದು ಮಹತ್ವದ್ದಾಗಿದೆ ಅದು ಸತ್ಯವಾದದ್ದಾಗಿರಲಿಕ್ಕಿಲ್ಲ. ಆದುದರಿಂದ, ಇತರ ಉದ್ದೇಶಗಳಿಗೆ ಮನವಿ ಮಾಡಿಕೊಳ್ಳುವ ಸಾಧ್ಯತೆಯನ್ನು ಪರೀಕ್ಷಿಸೋಣ.

ಆ ಇತರ ಉದ್ದೇಶಗಳು ಇತರ ಜನರಿಗೆ ಈಗಾಗಲೇ ಇರುವ ಆಸಕ್ತಿಗಳನ್ನು ಒಳಗೊಂಡಿರುತ್ತವೆ. ಅವರು ಪರಲೋಕಕ್ಕೆ ಹೋಗುವದರಲ್ಲಿ ಅತೀ ಹೆಚ್ಚಾಗಿ ಆಸಕ್ತಿಯುಳ್ಳವರಾಗಿದ್ದು, ನರಕವನ್ನು ತಪ್ಪಿಸಿಕೊಳ್ಳಲು ಬಯಸುವವರಾಗುವಾಗ, ಆ ಕ್ಷಣದಲ್ಲಿ ಅವು ಅವರ ಕೇಂದ್ರೀಕೃತ ಸಂಗತಿಗಳಾಗಿರಲಿಕ್ಕಿಲ್ಲ. ಅದು ಹಾಗಿದ್ದರೆ, ಸಭೆಯ ನಾಯಕರು ಅವರ ಪ್ರಾಧಾನ್ಯತೆಗಳನ್ನು ಬದಲಾಯಿಸಲು ಸಹಾಯ ಮಾಡುವ ಅಗತ್ಯತೆಯಿದೆ ಆದರೆ ಅದು ಬೇಗನೇ ಸಂಭವಿಸುವದಿಲ್ಲ. ಇಂದು ಜನರ ಅನಿಸುವಿಕೆಯ ಅಗತ್ಯತೆಗಳ ಯಾದಿಯ ಮೇಲೆ

ಉನ್ನತವಾಗಿರುವವೆಂದು ನಾನು ನಂಬಿರುವ ಕೆಲವು ಚಿಂತನೆಗಳು ಇಲ್ಲಿವೆ:

*ಸ್ವಪ್ರತಿಷ್ಠೆ:* ಜನರು ತಮ್ಮನ್ನು ಮೌಲ್ಯವುಳ್ಳ ಜನರಂತೆ ಯೋಚಿಸಬೇಕೆಂದು ಬಯಸುತ್ತಾರೆ.
*ಸ್ವೀಕಾರ:* ತಮ್ಮನ್ನು ಮೌಲ್ಯವುಳ್ಳ ಜನರಂತೆ ಸ್ವೀಕರಿಸುವದರಿಂದ ಇತರರು ಆ ಭಾವನೆಯನ್ನು ದೃಢಪಡಿಸಬೇಕೆಂದು ಅವರು ಬಯಸುತ್ತಾರೆ.
*ಸ್ನೇಹ:* ಅವರು ಸ್ನೇಹಿತರನ್ನು ಬಯಸುತ್ತಾರೆ.
*ಕುಟುಂಬ:* ಅವರು ಆನಂದಕರವಾದ ಮತ್ತು ಯಶಸ್ಸುಳ್ಳ ಕುಟುಂಬಗಳನ್ನು ಬಯಸುತ್ತಾರೆ.
*ಸಹಾಯ:* ನೋವಿನ ಸಮಯಗಳಲ್ಲಿ ಅವರು ಸಹಾಯವನ್ನು ಬಯಸುತ್ತಾರೆ.
*ಯಶಸ್ಸು:* ಅವರು ಯಶಸ್ವಿಯಾಗುವದನ್ನು ಬಯಸುತ್ತಾರೆ.

ಜನರು ಏನನ್ನು ಬಯಸುತ್ತಾರೆ ಎಂಬುದನ್ನು ನಾಯಕರು ಒಮ್ಮೆ ಅರ್ಥಮಾಡಿಕೊಂಡರೆ, ಪ್ರತಿಯೊಂದು ನೀತಿಯುಳ್ಳ ಅಪೇಕ್ಷೆಯು ಸಭೆಯಲ್ಲಿ ಮತ್ತು ಸಭೆಯ ಮೂಲಕ ಚೆನ್ನಾಗಿ ಪೂರೈಸಲ್ಪಡಬಹುದೆಂಬದನ್ನು ಅವರು ನೋಡುವಂತೆ ಅವರಿಗೆ ಸಹಾಯ ಮಾಡಲು ಪ್ರಯತ್ನಿಸಬೇಕು. ರಕ್ಷಿಸಲ್ಪಡುವದರಲ್ಲಿ, ಸಭೆಯಲ್ಲಿ ನಂಬಿಗಸ್ತಿಕೆಯಿಂದ ಜೀವಿಸುವದರಲ್ಲಿ, ಮತ್ತು ಪರಲೋಕಕ್ಕೆ ಹೋಗುವದರಲ್ಲಿ, ಅವರ ತಕ್ಷಣದ ಅಗತ್ಯತೆಗಳಲ್ಲಿಯೂ ಅಪೇಕ್ಷೆಗಳ ಲ್ಲಿಯೂ ಅನೇಕವುಗಳು ಇಲ್ಲವೇ ಹೆಚ್ಚಾದವುಗಳು ತೃಪ್ತಿಪಡಿಸಲ್ಪಡುವವು ಎಂದು ಅವು ಅವರಿಗೆ ತೋರಿಸುವವು.

ಉದಾಹರಣೆಯಾಗಿ: "ಯಾರೋ ಒಬ್ಬನಂತಾಗುವ" ಅಪೇಕ್ಷೆಯು ಅವರಿಗಿದ್ದರೆ, ಗೌರವಕ್ಕಾಗಿ ಇಲ್ಲವೇ ಅಂತಸ್ತಿಗಾಗಿ ಅಪೇಕ್ಷೆಯಿದ್ದರೆ, ದೇವರ ಮಗುವಾಗಿರುವದಕ್ಕಿಂತ ಹೆಚ್ಚು ಉನ್ನತವಾದ ಅಂತಸ್ತು ಅವರಿಗೆ ಯಾವುದು ಇರುವುದು? (1 ಯೋಹಾನ 3:1, 2). ತಮ್ಮ ಮಕ್ಕಳಿಗೆ ಪ್ರತಿಯೊಂದರ ಅತ್ಯುತ್ತಮವಾದದ್ದು ಇರಬೇಕೆಂದು ಅವರು ಬಯಸಿದರೆ, ಅವರು ತಮ್ಮ ಮಕ್ಕಳಿಗೆ ಕೊಡುವ ಅತ್ಯುತ್ತಮವಾದದ್ದು ಕ್ರೈಸ್ತ ತಂದೆ ತಾಯಿಗಳು ಮತ್ತು ಸಭೆಯ ಪರಿಸರದಲ್ಲಿ ಬೆಳೆಯುವ ಒಂದು ಅವಕಾಶ ಎಂದು ನಾವು ತೋರಿಸುವದಿಲ್ಲವೋ? ಅವರಿಗೆ ಸ್ನೇಹಿತರುಗಳ ಅಗತ್ಯತೆ ಇದ್ದರೆ, ಇಲ್ಲವೇ ಏಕಾಂಗಿಗಳೂ ಬೇರೆಯಾಗಿ ಇಡಲ್ಪಟ್ಟವರೂ ಆಗಿರುವವೆಂಬ ಭಾವನೆ ಇದ್ದರೆ, ಸಭೆಯಲ್ಲಿ ಬಿಟ್ಟು ಬೇರೆ ಎಲ್ಲಿ ಅವರು ನಿಜವಾದ ಸ್ನೇಹಿ ತರನ್ನೂ ಹೆಚ್ಚು ನಿಜವಾದ ಅನ್ಯೋನ್ಯತೆಯನ್ನು ಕಂಡು ಕೊಳ್ಳುವರು? ಅವರು ನಿಜವಾ ಗಿಯೂ ಮಾನವ ಕುಲಕ್ಕೆ ಸೇವೆ ಮಾಡಲು ಬಯಸಿದರೆ, ಸಭೆಯಿಂದ ಒದಗಿಸಲ್ಪಡುವ ಸೇವೆಗೆ ಅವಕಾಶಗಳನ್ನು ಅವರು ತಿಳಿದುಕೊಳ್ಳುವಂತೆ ನಾವು ಮಾಡಬಾರದೋ? ಒಂದು ದೊಡ್ಡ ಕಾರಣದ ಭಾಗವಾಗಲು ಅವರು ಬಯಸಿದರೆ, ಕ್ರಿಸ್ತನ ಕಾರಣಕ್ಕಿಂತ ಹೆಚ್ಚು ದೊಡ್ಡ ಕಾರಣವು ಯಾವುದು ಇರುವುದು?

ಹೀಗಿದ್ದರೂ, ಕೆಲವು ಸಲ, ವ್ಯಕ್ತಿಗಳ ಅನುಭವಿಸಿದ ಅಗತ್ಯತೆಗಳು ಸಭೆಯಲ್ಲಿ ಪೂರೈ ಸಲ್ಪಡಲಾರವು. ಅಪೇಕ್ಷೆಗಳೊಂದಿಗೆ, ಆಶೆಗಳೊಂದಿಗೆ, ಅನೀತಿಯುಳ್ಳ ಹೆಬ್ಬಯಕೆಗಳೊಂದಿಗೆ ಎದುರಿಸುವಾಗ ಸಭಾ ನಾಯಕರು ಏನನ್ನು ಮಾಡುವರು?

ಉದಾಹರಣೆಯಾಗಿ, ಕೆಲವರ ಪ್ರಾಥಮಿಕ ಗುರಿಯು ಮಿತಿಮೀರಿದ ಮೊತ್ತದಲ್ಲಿ ಹಣ ಮಾಡುವುದಾಗಿದ್ದಿರಬಹುದು - ಈ ಗುರಿಯು ಕ್ರೈಸ್ತ ಮೌಲ್ಯಗಳೊಂದಿಗೆ ಹೊಂದಿಕೊಂಡು ಹೋಗುವಂಥದ್ದಾಗಿರುವದಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ, ಹಣ ಮಾಡಿಕೊಳ್ಳಲು ಬಯಸುವರಿಗೆ ಸಭೆಯ ನಾಯಕರು ಮನವಿ ಮಾಡಲು ಏನು ಮಾಡಬೇಕು? ಮೊದಲನೆಯದು, ಅವರು, ಬೋಧನೆಯ ಮುಖಾಂತರ, ಅವರು ತಮ್ಮ ಗುರಿಗಳನ್ನು ಬದಲಾಯಿಸಿಕೊಳ್ಳುವ ಅಗತ್ಯತೆಯನ್ನು ಕಂಡು ಕೊಳ್ಳುವಂತೆ ಸಹಾಯ ಮಾಡಲು ಪ್ರಯತ್ನಿಸಬೇಕು. ಎರಡನೆಯದು, ಅವರು ಅಪೇಕ್ಷಿಸುವಂಥದ್ದು ಕೇವಲ ಹಣವಲ್ಲ, ಆದರೆ ನಿಶ್ಚಿತವಾದ ಭದ್ರತೆ ಇಲ್ಲವೇ ಹಣದಿಂದ ಅವರು ಪಡೆದುಕೊಳ್ಳುವಂತೆ ಯೋಚಿಸಲು ಸುಖವಾಗಿರುವುದು ಎಂದು ಜನರು ತಿಳಿದು ಕೊಳ್ಳುವಂತೆ

ಅವರಿಗೆ ಸಹಾಯ ಮಾಡುವುದು. ಮೂರನೆಯದು, ಜನರು ತಾವು ಹುಡುಕುತ್ತಿರುವದನ್ನು ಬೇರೆ ಮಾರ್ಗಗಳಲ್ಲಿ - ನೀತಿಯ ಮಾರ್ಗಗಳಲ್ಲಿ ಪಡೆದು ಕೊಳ್ಳಬಹುದೆಂಬುದನ್ನು ನೋಡಲಿಕ್ಕೆ ಅವರಿಗೆ ಅವರು ಸಹಾಯ ಮಾಡಬಹುದು. ಉದಾಹರಣೆಯಾಗಿ, ಹಣವು ಗುರುತಿಸುವಿಕೆಯನ್ನು ತರುತ್ತದೆ. ಹೀಗಿದ್ದರೂ, ಕ್ರಿಸ್ತನಿಗಾಗಿ ಜೀವಿಸುವುದೂ ಸಹ ಗೌರವವನ್ನು ಇತರರಿಂದ ಹಾಗೂ ಕರ್ತನಿಂದ, ಈಗಲೂ ನಿತ್ಯತ್ವದಲ್ಲಿಯೂ ತರುವುದು ಮತ್ತು ಅದರ ಅರ್ಥ ಹಣವು ಕೊಂಡುಕೊಳ್ಳಲಾರದಂಥ ಗೌರವವನ್ನು ಅದು ತರುತ್ತದೆ.

## ಮುಕ್ತಾಯ

ಬಹುಶಃ ಇತರರನ್ನು ಪ್ರೇರೇಪಿಸುವದರಲ್ಲಿ ಅತೀ ಹೆಚ್ಚು ಮಹತ್ವದ ಹೆಜ್ಜೆಯು ಸಭೆಯ ನಾಯಕರು ತಮ್ಮನ್ನು ಇತರರ ಸ್ಥಾನದಲ್ಲಿಟ್ಟುಕೊಂಡು, “ನಮ್ಮ ನಡತೆಯನ್ನು ಬದಲಾಯಿಸಲು ನಾವು ಬಯಸುವದನ್ನು ಯಾವುದು ಮಾಡುವುದು?” ಎಂದು ಕೇಳಿ ಕೊಳ್ಳುವುದಾಗಿದೆ. ಆಮೇಲೆ ಅವರು ತಮ್ಮ ವಿಧಾನಗಳನ್ನು ಮತ್ತು ಮನವಿಗಳನ್ನು ಆ ಪ್ರಶ್ನೆಯ ಉತ್ತರದ (ಗಳ) ಮೇಲೆ ಅವಲಂಭಿಸಬೇಕು.

ಜನರ ಮನವೊಲಿಸಲಿಕ್ಕೆ ಪ್ರಯತ್ನಿಸುವುದು ನ್ಯಾಯ ಬದ್ಧವಾದದ್ದಾಗಿರುವುದೋ? “ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ” (2 ಕೊರಿಂಥ 5:11). ಆತನ ಒಡಂಬಡಿಸುವ ಬಲಗಳು ಫಿಲೆಮೋನನಿಗೆ ಬರೆದ ಚಿಕ್ಕ ಪತ್ರದಲ್ಲಿ ವಿಶೇಷವಾಗಿ ಪುರಾವೆಯಾಗಿವೆ. ಓಡಿಹೋದ ದಾಸನಾದ ಓನೇಸಿಮನನ್ನು ಸ್ವೀಕರಿಸ ಬೇಕೆಂದು ಫಿಲೆಮೋನನನ್ನು ಒಡಂಬಡಿಸಲು ಪೌಲನು ಹುಡುಕಿದನು. ಓನೇಸೀಮನು ಓಡಿ ಹೋದ ನಂತರ ಪೌಲನು ಅವನನ್ನು ಮಾರ್ಪಡಿಸಿದ್ದನು. ಮತ್ತು ಈಗ ಪೌಲನು ಅವನನ್ನು ಹಿಂದಿರುಗಿ ಸ್ವೀಕರಿಸಬೇಕೆಂದು ಫಿಲೆಮೋನನ ಮನವೊಲಿಸಿದನು ಗುಲಾಮನಂತೆ ಅಲ್ಲ, ಆದರೆ “ಪ್ರಿಯ ಸಹೋದರನಂತೆ” (ವಚನಗಳು 16). ಪೌಲನು ಫಿಲೆಮೋನನಿಂದ ಇನ್ನೂ ಹೆಚ್ಚಾದದ್ದನ್ನು ಬಯಸಿದನು. ತನಗೆ ಸಹಾಯಮಾಡಲು ಫಿಲೆಮೋನನು ಓನೇಸಿಮನನ್ನು ಹಿಂದಿರುಗಿ ಕಳುಹಿಸಬೇಕೆಂದು ಪೌಲನು ಅಪೇಕ್ಷಿಸಿದನು. ಓನೇಸಿಮನಿಗೆ ಅವನ ಸ್ವಾತಂತ್ರ್ಯವನ್ನು ಕೊಡಬೇಕಾದದ್ದು ಒಳ್ಳೆಯ ವಿಚಾರವೆಂದು ಅವನು ಸೂಚಿಸಿದ್ದಿರ ಬಹುದು (ವಚನಗಳು 21).

ತಾನು ಸೂಚಿಸಿದ್ದನ್ನು ಮಾಡುವಂತೆ ಪೌಲನು ಫಿಲೆಮೋನನನ್ನು ಹೇಗೆ ಒಡಂಬಡಿಸಿದನು?

ಫಿಲೆಮೋನನಿಗೆ ಅವನು ಆದರದ ಮಾತುಗಳನ್ನು ಹೇಳಿದನು (ವಚನಗಳು 4-7). ತಾನು ಯಾರು ಮತ್ತು ತಾನು ಏನಾಗಿದ್ದನು ತನಗೆ ಆಜ್ಞಾಪಿಸಲು ಹಕ್ಕುಳ್ಳವನಾಗಿದ್ದು ಆದರೆ ಮನವಿ ಮಾಡಲು ಆಯ್ಕೆ ಮಾಡಿಕೊಂಡವನು - ಎಂಬುದರ ಆಧಾರದ ಮೇಲೆ ಅವನು ಫಿಲೆಮೋನನಿಗೆ ಮನವಿ ಮಾಡಿಕೊಂಡನು (ವಚನಗಳು 8, 9), ತಾನು ಮುದುಕನು (ವಚನ 9), ಕ್ರಿಸ್ತನ ನಿಮಿತ್ತ ಸೆರೆಯವನು, ಮತ್ತು ಫಿಲೆಮೋನನ ಸ್ವಂತ ಜೊತೆಗಾರನು (ವಚನ 17). ಅವನು ಓನೇಸಿಮನೊಂದಿಗೆ ತನ್ನ ಕ್ರೈಸ್ತ ಸಂಬಂಧಗಳನ್ನು ಮತ್ತು ಅವನಿಗಾಗಿ ತನ್ನ ಪ್ರೀತಿಯ ಬಗ್ಗೆ ಫಿಲೆಮೋನನಿಗೆ ಹೇಳಿದನು (ವಚನಗಳು 10, 12, 13, 16, 17). ಪೌಲನು ಓನೇಸಿಮನೊಂದಿಗೆ ಫಿಲೆಮೋನನ ಅತ್ಯಾಸಕ್ತಿಗಳನ್ನೂ ಯೋಚಿಸಿದನು: ಓನೇಸಿಮನು ಅವನಿಗೆ “ಉಪಯುಕ್ತನಾಗಿದ್ದನು” (KJV: “ಲಾಭದಾಯಕನು”) (ವಚನ 11). ಪೌಲನು ಓನೇಸಿಮನೊಂದಿಗೆ ಫಿಲೆಮೋನನಿಗೆ ಇರುವ ಸಂಬಂಧವನ್ನು ಮಾತಾಡಿದನು: ಒಮ್ಮೆ ಅಪ್ರಯೋಜಕನು, ಈಗ ಪ್ರಯೋಜಕನು (ವಚನ 11); ಫಿಲೆಮೋನನ ಸ್ಥಳದಲ್ಲಿ ಪೌಲನಿಗೆ ಸಹಾಯ ಮಾಡಬಲ್ಲವನು (ವಚನ 13); ಸಂಬಂಧವು ತಾತ್ಕಾಲಿಕವಾಗಿ ಬೇರೆಯಾಗಿ ಹೋಗಿತ್ತು, ಆದರೆ ಈಗ ಸದಾಕಾಲಕ್ಕೂ ಸ್ಥಾಪಿಸಲ್ಪಡುವುದು (ವಚನ 15); ಮೊದಲು ಒಬ್ಬ

ಗುಲಾಮನು, ಆದರೆ ಈಗ ಪ್ರಿಯ ಸಹೋದರನು ಮತ್ತು ಪುನಃ ಫಿಲೆಮೋನನ ಕುಟುಂಬದ ಸದಸ್ಯನು (ವಚನ 16). ಕ್ರಿಸ್ತನ ಕಾರ್ಯಕ್ಕಾಗಿ (ವಚನಗಳು 13, 14) ಮತ್ತು ಅವನ ಕರ್ತವ್ಯದ ಅರುಹಿಗಾಗಿ ಫಿಲೆಮೋನನ ಚಿಂತನೆಗೆ ಅವನು ಮನವಿಮಾಡಿದನು. ಫಿಲೆಮೋನನ ಕೃತ್ಯವು ಬಲಾತ್ಕಾರದಿಂದಾಗದೇ ಮನಃ ಪೂರ್ವಕವಾದದ್ದಾಗಿರಬೇಕೆಂದು ಹೇಳಿದ್ದರಲ್ಲಿಯೂ (ವಚನ 14) ಫಿಲೆಮೋನನ "ಕರ್ತವ್ಯ" ಮನೋಭಾವನೆಗೆ "ಸರಿಯಾದದ್ದನ್ನು ಮಾಡಬೇಕೆಂದು ಅಪೇಕ್ಷೆಗೆ ಮನವಿಮಾಡಿರಬೇಕು" (ವಚನಗಳು 8, 21). ಅನಂತರ ಪೌಲನು ತಾನೇ ಫಿಲೆಮೋನನಿಗೆ ಮಾಡಿದ್ದಕ್ಕಾಗಿ ಫಿಲೆಮೋನನ ಕೃತಜ್ಞತೆಗೆ ಮನವಿಮಾಡಿದನು (ವಚನಗಳು 17-19). ಆಗ ಅವನು ಫಿಲೆಮೋನನಿಗೆ ಪೌಲನೊಂದಿಗಿದ್ದ ಸಂಬಂಧದ ಬಗ್ಗೆ ಮಾತಾಡಿದನು (ವಚನ 20). ಅಂತಿಮವಾಗಿ, ಫಿಲೆಮೋನನು ಮಾಡಬೇಕಾದದ್ದನ್ನು ಮಾಡುವನೆಂಬ ಭರವಸೆಯನ್ನು ವ್ಯಕ್ತಪಡಿಸಿದನು (ವಚನ 21).

ಇಂದು ಕ್ರೈಸ್ತರನ್ನು ಮನವೊಲಿಸಲು ಇಲ್ಲವೇ ಪ್ರೇರೇಪಿಸಲು ಬಯಸುವವರು ಫಿಲೆಮೋನನ ಪುಸ್ತಕದಲ್ಲಿಯ ಪೌಲನ ಉದಾಹರಣೆಯನ್ನು ಅನುಸರಿಸಬೇಕು.

---

ಟಿಪ್ಪಣಿಗಳು

[1]James E. Means, *Leadership in Christian Ministry* (Grand Rapids, Mich.: Baker Book House, 1989), 169-75. [2]Ibid., 175-80. [3]Ibid., 179. [4]See George C. Hunter III, *The Contagious Congregation* (Nashille: Abingdon, 1979), 39ff. "ಮಾನವ ಉದ್ದೇಶಗಳ ಮೇಲೆ ಪ್ರಾರಂಭಿಸು" ಎಂದು ಅವನು ಹೇಳುತ್ತಾನೆ, ಮತ್ತು ಅಬ್ರಹಾಮ್ ಮಾಸ್ಲೋವರ "Hierarchy of Human Motives"ನ್ನು ಜನರ ಮನವೊಲಿಸುವಲ್ಲಿ ಹೇಗೆ ಉಪಯೋಗಿಸಬೇಕೆಂದು ತೋರಿಸುತ್ತಾನೆ.